ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS
ಇಲಾಖೆ / ವಿಷಯ : DEPARTMENT / SUBJECT: ಕೃಷಿ (ಕೇಂದ್ರ)
ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ
ದಿನಾಂಕ : DATE: 2/6/20

## 14 ಮುಂಗಾರು ಬೆಳೆಗಳ ಕನಿಷ್ಠ ಬೆಂಬಲ ಬೆಲೆ ಏರಿಕೆ । ರೈತರ ಲಾಭ 50% ಹೆಚ್ಚಳಕ್ಕೆ ಕ್ರಮ

## ಸಣ್ಣ ಕೈಗಾರಿಕೆಗೆ ಮತ್ತಷ್ಟು ನೆರವಿನ ಪ್ಯಾಕೇಜ್ । ಬೀದಿ ವ್ಯಾಪಾರಿಗಳಿಗೆ ಸುಲಭ ಸಾಲ

# ರೈತರಿಗೆ ಬಂಪರ್ ಕೊಡುಗೆ


**ಹೊಸದಿಲ್ಲಿ:** ಲಾಕ್‌ಡೌನ್, ಬೆಲೆ ಕುಸಿತ, ಆದಾಯ ಕೊರತೆಯಿಂದ ಸಂಕಷ್ಟಕ್ಕೆ ಸಿಲುಕಿದ್ದ ದೇಶದ ರೈತರಿಗೆ ಒಮ್ಮೆಲೆ ಡಬಲ್ ಖುಷಿ ಸಿಕ್ಕಿದೆ. ಒಂದೆಡೆ ಕೃಷಿ ಚಟುವಟಿಕೆ ಆರಂಭಕ್ಕೆ ಮುಂಗಾರು ಮಳೆ ಸಿಂಚನ ಮುನ್ನುಡಿ ಬರೆದಿದೆ. ಮತ್ತೊಂದೆಡೆ ಕೇಂದ್ರ ಸರಕಾರ ಮುಂಗಾರು ಬೆಳೆಗಳಿಗೆ ಭರ್ಜರಿ ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಘೋಷಿಸುವ ಮೂಲಕ ರೈತರ ಆದಾಯ ಹೆಚ್ಚಳಕ್ಕೆ ಕ್ರಮ ಕೈಗೊಂಡಿದೆ.

ಭತ್ತ, ರಾಗಿ, ಜೋಳ, ದ್ವಿದಳ ಧಾನ್ಯಗಳು ಸೇರಿದಂತೆ ಒಟ್ಟು 14 ಬೆಳೆಗಳ ಕನಿಷ್ಠ ಬೆಂಬಲ ಬೆಲೆಯನ್ನು ಶೇ. 50ರಿಂದ ಶೇ.84ರವರೆಗೂ ಹೆಚ್ಚಳ ಮಾಡಲಾಗಿದೆ. 'ಕೃಷಿ ವೆಚ್ಚ ಮತ್ತು ಬೆಲೆ ಆಯೋಗ'ದ ವರದಿ ಆಧರಿಸಿ ಉತ್ಪಾದನಾ ವೆಚ್ಚಕ್ಕಿಂತಲೂ 1.5 ಪಟ್ಟು ಅಧಿಕ ಮಟ್ಟದಲ್ಲಿ ಬೆಂಬಲ ಬೆಲೆಯನ್ನು ನಿಗದಿಗೊಳಿಸಲಾಗಿದೆ.

'ಎನ್‌ಡಿಎ 2.0' ಸರಕಾರ ಒಂದು ವರ್ಷ ಪೂರೈಸಿದ ಬಳಿಕ ಸೋಮವಾರ ನಡೆದ ಮೊದಲ ಸಂಪುಟ ಸಭೆಯಲ್ಲಿ ಈ ಸಂಬಂಧ ಪ್ರಸ್ತಾಪಗಳಿಗೆ ಅನುಮೋದನೆ ದೊರೆತಿದೆ. ಅಲ್ಲದೆ, ಸಣ್ಣ ಮತ್ತು ಮಧ್ಯಮ ಗಾತ್ರದ ಕೈಗಾರಿಕೆಗಳಿಗೆ ನೆರವಾಗುವ ಹಲವು ನಿರ್ಣಯಗಳಿಗೂ ಸಂಪುಟ ಸಭೆ ಹಸಿರು ನಿಶಾನೆ ತೋರಿದೆ. ಜೊತೆಗೆ ಬೀದಿ ಬದಿ ವ್ಯಾಪಾರಿಗಳ ಸಂಕಷ್ಟಕ್ಕೂ ಸರಕಾರ ಸ್ಪಂದಿಸಿದೆ. ಅವರಿಗೆ ಸುಲಭ ಸಾಲ ನೀಡಲು 'ಪಿಎಂ ಸ್ವನಿಧಿ' ಹೆಸರಿನ ಹೊಸ ಯೋಜನೆಯನ್ನು ಆರಂಭಿಸಲಾಗಿದೆ. ನಗರ ಸ್ಥಳೀಯ ಸಂಸ್ಥೆಗಳ ಮೂಲಕ ಈ ಯೋಜನೆ ಜಾರಿಗೊಳ್ಳಲಿದೆ.

**ಸಾಲ ಮರುಪಾವತಿ ಗಡುವು ವಿಸ್ತರಣೆ**

ಬ್ಯಾಂಕ್‌ಗಳಿಂದ ಪಡೆದ 3 ಲಕ್ಷ ರೂ.ವರೆಗಿನ ಅಲ್ಪಾವಧಿ ಕೃಷಿ ಸಾಲ ಮರುಪಾವತಿಯ ಗಡುವನ್ನು ಆಗಸ್ಟ್ 31, 2020ರವರೆಗೂ ವಿಸ್ತರಿಸಲಾಗಿದೆ. ಈ ಗಡುವಿನೊಳಗೆ ಮರುಪಾವತಿ ಮಾಡಿದರೆ ಬಡ್ಡಿ ರಿಯಾಯಿತಿ ದೊರೆಯಲಿದೆ.



**2020-21**
**ಕನಿಷ್ಠ ಬೆಂಬಲ ಬೆಲೆ ಹೆಚ್ಚಳ ಅನ್ವಯವಾಗುವ ಅವಧಿ**

**35 ಲಕ್ಷ ಹೆಕ್ಟೇರ್**
**ಈಗಾಗಲೇ ಭತ್ತ ನಾಟಿ ಆರಂಭವಾಗಿರುವ ಕೃಷಿ ಭೂಮಿ**









### ಎಂಎಸ್‌ಎಂಇ ವ್ಯಾಖ್ಯಾನ ಬದಲು

ಆತ್ಮನಿರ್ಭರ ಪ್ಯಾಕೇಜ್‌ನ ಭಾಗವಾಗಿ

ಸಣ್ಣ, ಅತಿಸಣ್ಣ ಮತ್ತು ಮಧ್ಯಮ ಗಾತ್ರದ ಕೈಗಾರಿಕೆಗಳ (ಎಂಎಸ್‌ಎಂಇ) ವ್ಯಾಖ್ಯಾನವನ್ನು ಪರಿಷ್ಕರಿಸುವ ಪ್ರಸ್ತಾವನೆಗೆ ಸಂಪುಟದ ಅನುಮೋದನೆ ದೊರೆತಿದೆ. ಇನ್ನು ಮುಂದೆ 1 ಕೋಟಿ ಹೂಡಿಕೆ 5 ಕೋಟಿ ರೂ. ವಹಿವಾಟು ಹೊಂದಿರುವ ಸಂಸ್ಥೆಗಳನ್ನು ಅತಿಸಣ್ಣ ಉದ್ಯಮಗಳೆಂದು, 10 ಕೋಟಿ ರೂ. ಹೂಡಿಕೆ, 50 ಕೋಟಿ ವಹಿವಾಟು ಹೊಂದಿರುವ ಸಂಸ್ಥೆಗಳನ್ನು ಸಣ್ಣ ಉದ್ಯಮಗಳು ಹಾಗೂ 50 ಕೋಟಿ ಹೂಡಿಕೆ, 250 ಕೋಟಿ ವಹಿವಾಟು ಹೊಂದಿರುವ ಸಂಸ್ಥೆಗಳನ್ನು ಮಧ್ಯಮ ಗಾತ್ರದ ಉದ್ಯಮಗಳೆಂದು ಪರಿಗಣಿಸಲಾಗುವುದು. ಇದರಿಂದ 6 ಕೋಟಿ ಉದ್ಯಮಗಳು 11 ಕೋಟಿ ಉದ್ಯೋಗಿಗಳಿಗೆ ನೆರವಾಗಲಿದೆ ಎಂದು ಸರಕಾರ ಹೇಳಿದೆ.



### ಚಾಂಪಿಯನ್ ವೇದಿಕೆಗೆ ಚಾಲನೆ

ಸಣ್ಣ ಉದ್ಯಮಗಳಿಗೆ ತಾಂತ್ರಿಕ ಬೆಂಬಲ ನೀಡುವ ಉದ್ದೇಶದಿಂದ 'ಚಾಂಪಿಯನ್ಸ್' ಹೆಸರಿನ ನೂತನ ವೇದಿಕೆಗೆ ಪ್ರಧಾನಿ ಮೋದಿ ಚಾಲನೆ ನೀಡಿದ್ದಾರೆ. ಸಣ್ಣ ಉದ್ಯಮಗಳು ಕುಂದುಕೊರತೆ ನಿವಾರಣೆ, ಹೊಸ ಅವಕಾಶಗಳ ಶೋಧ, ಉದ್ಯಮಶೀಲತೆಗೆ ಉತ್ತೇಜನಕ್ಕೆ ಇದರ ಉದ್ದೇಶ.

### ಸಣ್ಣ ಉದ್ಯಮಗಳಿಗೆ ಇನ್ನೂ 70,000 ಕೋಟಿ ರೂ.

ಲಾಕ್‌ಡೌನ್‌ನಿಂದ ಸಂಕಷ್ಟಕ್ಕೆ ಸಿಲುಕಿರುವ 'ಎಂಎಸ್ ಎಂಇ'ಗಳಿಗೆ ಚೈತನ್ಯ ತುಂಬಲು ಹೆಚ್ಚುವರಿಯಾಗಿ 70,000 ಕೋಟಿ ರೂ. ಆರ್ಥಿಕ ನೆರವನ್ನು ಸಂಪುಟ ಸಭೆ ಅನುಮೋದಿಸಿದೆ. ಈ ಪೈಕಿ 50,000 ಕೋಟಿ ರೂ.ಗಳನ್ನು ಕಂಪನಿಗಳಲ್ಲಿ ಷೇರುಗಳ ಖರೀದಿ ಮೂಲಕ ಸರಕಾರ ಒದಗಿಸಲಿದೆ. ಉಳಿದ 20 ಸಾವಿರ ಕೋಟಿ ರೂ.ಗಳನ್ನು ಸಾಲದ ರೂಪದಲ್ಲಿ ನೀಡಲು ನಿರ್ಧರಿಸಲಾಗಿದೆ.

### ಬೀದಿ ವ್ಯಾಪಾರಿಗಳಿಗೆ ಪಿಎಂ ಸ್ವನಿಧಿ

ಬೀದಿ ಬದಿ ವ್ಯಾಪಾರಿಗಳಿಗೆ 10 ಸಾವಿರ ರೂ. ಸಾಲ ಯೋಜನೆಯನ್ನು ಸರಕಾರ ಪ್ರಕಟಿಸಿದೆ. 'ಪ್ರಧಾನ ಮಂತ್ರಿ ಸ್ಟ್ರೀಟ್ ವೆಂಡರ್ಸ್ ಆತ್ಮನಿರ್ಭರ್ ನಿಧಿ' (ಪಿಎಂ ಸ್ವನಿಧಿ) ಹೆಸರಿನ ಈ ಯೋಜನೆಯಿಂದ 50 ಲಕ್ಷ ಬೀದಿಬದಿ ಕಾರ್ಮಿಕರಿಗೆ ನೆರವು ನೀಡಲು ಉದ್ದೇಶಿಸಲಾಗಿದೆ.



**ಯಾವುದಕ್ಕೆ ಎಷ್ಟು? (ರೂ.ಗಳಲ್ಲಿ)**

| ಬೆಳೆ | ಹೆಚ್ಚಳ ರೂ.ಗಳಲ್ಲಿ | ಪರಿಷ್ಕೃತ ಬೆಲೆ ಕ್ವಿಂಟಾಲ್‌ಗೆ |
|---|---|---|
| ಭತ್ತ | 53 | 1,868 |
| ರಾಗಿ | 145 | 3,295 |
| ಜೋಳ | 70 | 2,620 |
| ಸಜ್ಜೆ | 640 | 2,640 |
| ಮೆಕ್ಕೆಜೋಳ | 90 | 1,850 |
| ಉದ್ದು | 300 | 6,000 |
| ತೊಗರಿ | 200 | 6,000 |
| ಹಲಸಂದಿ | 146 | 7,196 |
| ಸೋಯಾಬೀನ್ | 170 | 3,880 |
| ಸೂರ್ಯಕಾಂತಿ | 235 | 5,885 |
| ಕಡಲೆಕಾಯಿ | 185 | 5,275 |
| ಎಳ್ಳು | 370 | 6,855 |
| ಹುಚ್ಚೆಳ್ಳು | 775 | 6,695 |
| ಹತ್ತಿ | 260 | 5,515 |

ನಾನಾ ವಲಯಗಳಲ್ಲಿ ಹೂಡಿಕೆ ಸ್ನೇಹಿ ವಾತಾವರಣವನ್ನು ಸೃಷ್ಟಿಸಲು ಮೋದಿ ಸರಕಾರ ಸುಧಾರಣೆಯ ಕ್ರಮಗಳನ್ನು ಕೈಗೊಂಡಿದೆ. ಕಲ್ಲಿದ್ದಲು, ಗಣಿ, ಎಲೆಕ್ಟ್ರಾನಿಕ್ಸ್, ಔಷಧ ವಲಯದಲ್ಲಿ ಶೇ.100 ಎಫ್‌ಡಿಐಗೆ ಅನುಮತಿ ನೀಡಿದೆ. ಇದೀಗ ಎಂಎಸ್‌ಎಂಇ ವಲಯಕ್ಕೂ ಉತ್ತೇಜನ ನೀಡಿದೆ.